ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನಸಾಗರ ಆವರಣ, ವಿನಾಯಕ ನಗರ, ಬಳ್ಳಾರಿ - 583105

ಪರೀಕ್ಷಾ ವಿಭಾಗ

ದೂರವಾಣಿ ಸಂ. 08392-241011


ಕ್ರ.ಸಂ. ವಿಶ್ರೀಕೃವಿಬ/ಪರೀಕ್ಷಾ/ಸುತ್ತೋಲೆ/2017-18/2343 ದಿನಾಂಕ. 09-11-2017

# ಸುತ್ತೋಲೆ

ಈ ಸುತ್ತೋಲೆ ಮೂಲಕ ಎಲ್ಲಾ ಸ್ನಾತಕ ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರುಗಳ ಗಮನಕ್ಕೆ ತರಬಯಸುವುದೇನೆಂದರೆ, ನವೆಂಬರ್/ಡಿಸೆಂಬರ್-2017ರ ತಿಂಗಳಿನಲ್ಲಿ ಜರುಗುತ್ತಿರುವ ಸ್ನಾತಕ ಪದವಿ ಪರೀಕ್ಷೆಗಾಗಿ ಪರೀಕ್ಷಾ ಕೇಂದ್ರಗಳಿಗೆ ಸಲ್ಲಿಸಿದ ಪ್ರಶ್ನೆ ಪತ್ರಿಕೆಗಳ ಬಂಡಲ್‌ಗಳನ್ನು ಸ್ವೀಕರಿಸಿದ ನಂತರ ಭದ್ರವಾಗಿ ಸೀಲ್ ಮಾಡಬೇಕು. ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿ (IX, 13) ರಂತೆ, ಪರೀಕ್ಷೆಗಳನ್ನು ಪ್ರಾರಂಭವಾಗುವ ಅರ್ಧ ಗಂಟೆಯ ಮೊದಲು ಬಾಹ್ಯ ಹಿರಿಯ ಮೇಲ್ವಿಚಾರಕರ ಸಮ್ಮುಖದಲ್ಲಿಯೇ ಸೀಲ್ ಮಾಡಿದ ಅಲ್ಮೆರವನ್ನು ತೆರೆದು ಪ್ರಶ್ನೆ ಪತ್ರಿಕೆಗಳ ಕವರ್‌ಗಳನ್ನು ಹೊರ ತೆಗೆದು ಪ್ರಾಂಶುಪಾಲರು ಮತ್ತು ಬಾಹ್ಯ ಹಿರಿಯ ಮೇಲ್ವಚಾರಕರು ಪ್ರಶ್ನೆ ಪತ್ರಿಕೆಯ ಲಕೋಟೆಯನ್ನು ಹರಿದು ನಂತರ ಪ್ರಶ್ನೆ ಪತ್ರಿಕೆಯ ಲಕೋಟೆಯ ಮೇಲೆ ದಿನಾಂಕ ಮತ್ತು ಸಮಯವನ್ನು ನಮೂದಿಸಿ, ಸಹಿ ಮಾಡತಕ್ಕದ್ದು. ಇದಕ್ಕೆ ಸಂಬಂಧಿಸಿದಂತೆ ಏನಾದರೂ ವ್ಯತಿರಿಕ್ತವಾಗಿ ಲೋಪ ದೋಷಗಳು ಕಂಡು ಬಂದಲ್ಲಿ ಪರೀಕ್ಷಾ ಕೇಂದ್ರದ ಪ್ರಾಂಶುಪಾಲರುಗಳನ್ನೇ (ಆಂತರಿಕ ಹಿರಿಯ ಮೇಲ್ವಿಚಾರಕರು) ಹೊಣೆಗಾರರನ್ನಾಗಿ ಮಾಡಲಾಗುವುದು.

9/11/17

ಕುಲಸಚಿವರು (ಮೌಲ್ಯಮಾಪನ)

REGISTRAR (EVAL)
Vijayanagara Sri Krishnadevaraya University,
Jnana Sagar Campus, Vinayakanagar,
Cantonment, BALLARI-583 104.

ಗೆ,

ಸಂಬಂಧಿಸಿದ ಎಲ್ಲಾ ಸ್ನಾತಕ ಪರೀಕ್ಷಾ ಕೇಂದ್ರಗಳ ಮಹಾವಿದ್ಯಾಲಯದ ಪ್ರಾಂಶುಪಾಲರುಗಳಿಗೆ.

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ-ರವರಿಗೆ ಮಾಹಿತಿಗಾಗಿ.
2. ಕಛೇರಿ ಪ್ರತಿ.